# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಚನ್ನಬಸಪ್ಪ ಮೆಕಾಲೆ, ಹಿಂದಿನ ಸ.ಕಾ.ಇಂ.,ಶ್ರೀ ಬಸಯ್ಯ ಹಿರೇಮಠ, ಹಿಂದಿನ ಸ.ಕಾ.ಇಂ ಮತ್ತು ಶ್ರೀ ಎಸ್.ಜಿ.ಪಾಟೀಲ್, ಹಿಂದಿನ ಕಿರಿಯ ಇಂಜಿನಿಯರ್, ಪಂ.ರಾ.ಇಂ. ಉಪವಿಭಾಗ ಸುರಪುರ ಇವರುಗಳ ವಿರುದ್ಧ ಶಿಸ್ತು ಕ್ರಮ- ಅಂತಿಮ ಆದೇಶ.

ಓದಲಾಗಿದೆ:-

1. ನಿಬಂಧಕರು, ಕನಾಟಕ ಲೋಕಾಯುಕ್ತಕಛೇರಿ ಬೆಂಗಳೂರು ಇವರ ಅರೆ ಸರ್ಕಾರಿ ಪತ್ರ ಸಂಖ್ಯೆ: Compt/Uplok/GLB-7261/2014/DRE-3, ದಿನಾಂಕ:09.02.2018.
2. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 21 ಇಎನ್‌ಕ್ಯೂ 2018, ದಿನಾಂಕ:14.03.2018.
3. ಲೋಕಾಯುಕ್ತ ಕಛೇರಿಯ ಪತ್ರ ಸಂ: Uplok-1/DE/167/ 2018/ARE-4, ದಿನಾಂಕ:04.05.2018.
4. ಮಾನ್ಯ ಕೆ.ಎ.ಟಿ.ಯಲ್ಲಿ ದಾಖಲಾದ ಅರ್ಜಿ ಸಂಖ್ಯೆ: 20706-20708/2020ಕ್ಕೆ ಸಂಬಂಧಿಸಿದಂತೆ ನೀಡಿರುವ ಅಂತಿಮ ಆದೇಶ ದಿನಾಂಕ:09.11.2021.
5. ಸರ್ಕಾರಿ ವಕೀಲರು, ಮಾನ್ಯ ಆಡಳಿತ ನ್ಯಾಯ ಮಂಡಳಿ ಇವರ ಅಭಿಪ್ರಾಯ ಪತ್ರ ದಿನಾಂಕ:23.12.2021.

*******

**ಪ್ರಸ್ತಾವನೆ:**

2011-12ನೇ ಸಾಲಿನ ಸುರಪುರ ತಾಲ್ಲೂಕಿನ ಕಕ್ಕೇರಾ ಗ್ರಾಮದಲ್ಲಿ ಸಿಮೆಂಟ್ ಕಾಂಕ್ರಿಟ್ ರಸ್ತೆ ಮತ್ತು ಮೋರಿ ನಿರ್ಮಾಣ ಹಾಗೂ ಸೋಮನಾಥ ದೇವಸ್ಥಾನದಿಂದ ವಾಲ್ಮೀಕಿ ಸರ್ಕಲ್‌ವರೆಗೆ ಮತ್ತು ಗ್ರಾಮದೇವತೆ ದೇವಸ್ಥಾನದವರೆಗೆ ಸಿಮೆಂಟ್ ಕಾಂಕ್ರಿಟ್ ರಸ್ತೆ ಮತ್ತು ಮೋರಿ ನಿರ್ಮಾಣ ಕಾಮಗಾರಿಗಳನ್ನು ಕಳಪೆ ಮಟ್ಟದಲ್ಲಿ ಮಾಡಲಾಗಿದೆಯೆಂದು ಹಾಗೂ ಸದರಿ ಕಾಮಗಾರಿಗಳನ್ನು ಪೂರ್ಣಗೊಳಿಸದೆ ಹಣ ದುರುಪಯೋಗಪಡಿಸಿರುತ್ತಾರೆಂದು, ಶ್ರೀ ಮಲ್ಲಣ್ಣ ತಂದೆ ಮಲ್ಲಣ್ಣ ಹುಲಕೇರಿ, ಸುರಪುರ ತಾಲ್ಲೂಕು, ಯಾದಗಿರಿ ಇವರು ಲೋಕಾಯುಕ್ತ ಕಛೇರಿಯಲ್ಲಿ ಸಲ್ಲಿಸಿದ ದೂರಿನ ಮೇರೆಗೆ ಲೋಕಾಯುಕ್ತ ಕಚೇರಿಯು ತನಿಖೆ ಕೈಗೊಂಡು ಸರ್ಕಾರಕ್ಕೆ ಸಲ್ಲಿಸಿದ್ದ ವರದಿಯಲ್ಲಿ ಸದರಿ ಪ್ರಕರಣದಲ್ಲಿ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟು ಮಾಡಿರುವುದು ಮೇಲ್ನೋಟಕ್ಕೆ ಕಂಡುಬಂದ ಹಿನ್ನೆಲೆಯಲ್ಲಿ ಈ ಕೆಳಕಂಡ 07 ಜನ ಆಪಾದಿತ ಅಧಿಕಾರಿ/ನೌಕರರುಗಳ ವಿರುದ್ಧದ ಆರೋಪಗಳ ಬಗ್ಗೆ ವಿವರವಾದ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 11ರಂತೆ ನಡೆಸಲು ಸದರಿ ನಿಯಮಗಳ ನಿಯಮ 14(ಎ) ರನ್ವಯ ಪ್ರಕರಣವನ್ನು ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ:14.03.2018ರ ಸರ್ಕಾರದ ಆದೇಶದಲ್ಲಿ ಮಾನ್ಯ ಉಪ ಲೋಕಾಯುಕ್ತರವರಿಗೆ ವಹಿಸಲಾಗಿತ್ತು.

1. ಶ್ರೀ ಎಂ.ಆರ್.ಖಂದಾರೆ, ಹಿಂದಿನ ಕಾ.ಇಂ. ಪಂ.ರಾ.ಇಂ ವಿಭಾಗ, ಯಾದಗಿರಿ.
2. ಶ್ರೀ ಬಿ.ಮಂಜುನಾಥ, ಹಿಂದಿನ ಕಾ.ಇಂ. ಪಂ.ರಾ.ಇಂ ವಿಭಾಗ, ಯಾದಗಿರಿ.
3. ಶ್ರೀ ವಿಜಯಕುಮಾರ ಚತುರೆ, ಹಿಂದಿನ ಕಾ.ಇಂ. ಪಂ.ರಾ.ಇಂ ವಿಭಾಗ, ಯಾದಗಿರಿ.
4. ಶ್ರೀ ಚನ್ನಬಸಪ್ಪ ಮೆಕಾಲೆ, ಹಿಂದಿನ ಸ.ಕಾ.ಇಂ. ಪಂ.ರಾ.ಇಂ . ಉಪವಿಭಾಗ, ಸುರಪುರ.
5. ಶ್ರೀ ಬಸಯ್ಯ ಹಿರೇಮಠ, ಹಿಂದಿನ ಸ.ಕಾ.ಇಂ. ಪಂ.ರಾ.ಇಂ . ಉಪವಿಭಾಗ, ಸುರಪುರ.
6. ಶ್ರೀ ಎಸ್.ಜಿ.ಪಾಟೀಲ, ಹಿಂದಿನ ಕಿ.ಇಂ. ಪಂ.ರಾ.ಇಂ . ಉಪವಿಭಾಗ, ಸುರಪುರ.
7. ಶ್ರೀ ಎಸ್.ಬಿ.ಮಾಸಲವಾಡ, ಹಿಂದಿನ ಲೆಕ್ಕಾಧಿಕಾರಿ, ಪಂ.ರಾಂ.ಇಂ ಉಪವಿಭಾಗ, ಸುರಪುರ.(ಹಾಲಿ ನಿವೃತ್ತ).

ಅದರಂತೆ, ಮೇಲ್ಕಂಡ ಆಪಾದಿತರುಗಳ ವಿರುದ್ಧ ಇಲಾಖಾ ವಿಚಾರಣೆ ನಡೆಸುವ ಸಂಬಂಧ ಲೋಕಾಯುಕ್ತ ಕಛೇರಿಯು ಮೇಲೆ ಓದಲಾದ ಕ್ರಮ ಸಂಖ್ಯೆ (2)ರಲ್ಲಿ ಸದರಿಯವರುಗಳಿಗೆ ದೋಷಾರೋಪಣಾ ಪಟ್ಟಿಯನ್ನುಜಾರಿ ಮಾಡಿರುತ್ತದೆ.

ವಿಚಾರಣೆ ನಡೆಸಲು ಲೋಕಾಯುಕ್ತ ಸಂಸ್ಥೆಗೆ ವಹಿಸಲಾದ ಸರ್ಕಾರದ ದಿನಾಂಕ:14.03.2018ರ ಆದೇಶ ಹಾಗೂ ಲೋಕಾಯುಕ್ತ ಕಛೇರಿಯಿಂದ ದಿನಾಂಕ:04.05.2018ರಂದು ಜಾರಿಗೊಳಿಸಿದ ದೋಷಾರೋಪಣಾ ಪಟ್ಟಿಯನ್ನು ಪ್ರಶ್ನಿಸಿ ಮೇಲ್ಕಂಡ ಆಪಾದಿತರುಗಳ ಪೈಕಿ ಶ್ರೀ ಚನ್ನ ಬಸಪ್ಪ ಮೆಕಾಲೆ, ಹಿಂದಿನ ಸ.ಕಾ.ಇಂ, ಶ್ರೀ ಬಸಯ್ಯ ಹಿರೇಮಠ, ಹಿಂದಿನ ಸ.ಕಾ.ಇಂ ಹಾಗೂ ಶ್ರೀ ಎಸ್.ಜಿ.ಪಾಟೀಲ, ಹಿಂದಿನ ಕಿ.ಇಂ, ಉಪವಿಭಾಗ, ಸುರಪುರ ಇವರುಗಳು ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿ, ಕಲಬುರಗಿ ಇಲ್ಲಿಅರ್ಜಿ ಸಂಖ್ಯೆ: 20706-20708/2020ನ್ನು ದಾಖಲಿಸಿದ್ದು, ಸದರಿ ಅರ್ಜಿಯ ವಿಚಾರಣೆ ನಡೆಸಿದ ಮಾನ್ಯ ನ್ಯಾಯ ಮಂಡಳಿಯು ಸರ್ಕಾರದ ದಿನಾಂಕ:14.03.2018ರ ಆದೇಶ ಹಾಗೂ ಲೋಕಾಯುಕ್ತ ಕಛೇರಿಯಿಂದ ಜಾರಿಗೊಳಿಸಿದ ದೋಷಾರೋಪಣಾ ಪಟ್ಟಿಯನ್ನು ಓದಲಾದ ಕ್ರಮ ಸಂಖ್ಯೆ (4) ರ ದಿನಾಂಕ: 09.11.2021 ರಲ್ಲಿ ರದ್ದುಪಡಿಸಿರುತ್ತದೆ. ಸದರಿ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಲು ಅರ್ಹ ಪ್ರಕರಣವಾಗಿಲ್ಲವೆಂದು ಸರ್ಕಾರಿ ವಕೀಲರು, ಕರ್ನಾಟಕ ಆಡಳಿತ ನ್ಯಾಯ ಮಂಡಳಿ ಇವರು ಅಭಿಪ್ರಾಯ ನೀಡುತ್ತಾರೆ.

ಸರ್ಕಾರವು ಸದರಿ ಪ್ರಕರಣದಲ್ಲಿ ಸಂಬಂಧಪಟ್ಟ ದಾಖಲೆಗಳನ್ನು ಹಾಗೂ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ದಿನಾಂಕ:09.11.2021ರ ಆದೇಶ ಹಾಗೂ ಸರ್ಕಾರಿ ವಕೀಲರು ನೀಡಿರುವ ಅಭಿಪ್ರಾಯವನ್ನು ಪರಿಶೀಲಿಸಿರುತ್ತದೆ. ಮಾನ್ಯ ಕೆ.ಎ.ಟಿ.ಯು ಸದರಿ ಪ್ರಕರಣದಲ್ಲಿ ನೀಡಿರುವ ಆದೇಶದಲ್ಲಿ ಲೋಕಾಯುಕ್ತ ಕಛೇರಿಯ ತಾಂತ್ರಿಕ ವಿಭಾಗವು ಕೈಗೊಂಡ ತನಿಖೆಯಲ್ಲಿ ಆಪಾದಿತರು ಕಾಮಗಾರಿಗಳನ್ನು ನಿಯಮಾನುಸಾರ ಅನುಷ್ಠಾನಗೊಳಿಸಿದ್ದಾರೆಂದು ತಿಳಿಸಿದ್ದು, ದೂರು ಅರ್ಜಿಯಲ್ಲಿನ ಆರೋಪವು ಸಾಭೀತಾಗಿರುವುದಿಲ್ಲ. ಆದರೆ ಮಾನ್ಯ ಉಪಲೋಕಾಯುಕ್ತರವರು ಇದಕ್ಕೆ ವಿರುದ್ಧವಾದ ನಿಲುವನ್ನು ಕೈಗೊಂಡು ಕಲಂ 12(3)ರಂತೆ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಆದರೆ ಈ ರೀತಿ ವಿಭಿನ್ನವಾದ ನಿಲುವು ಕೈಗೊಂಡಿರುವುದನ್ನು ಅರ್ಜಿದಾರರುಗಳಿಗೆ ತಿಳಿಸಿಲ್ಲದ ಕಾರಣ ಸದರಿ ಕ್ರಮವು ಸಮರ್ಥನೀಯವಲ್ಲವೆಂದು ತಿಳಿಸಿ ಉಪ ಲೋಕಾಯುಕ್ತರ ಕ್ರಮವು ಲೋಕಾಯುಕ್ತ ಕಾಯ್ದೆ ಕಲಂ 9ರಡಿ ಉಲ್ಲಂಘನೆಯಾಗಿರುತ್ತದೆ ಎಂದು ಸ್ಪಷ್ಟಪಡಿಸಿರುತ್ತದೆ. ಅಲ್ಲದೆ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ವಿವಿಧ ಪ್ರಕರಣಗಳಲ್ಲಿ ನೀಡಿರುವ ತೀರ್ಪುಗಳನ್ನು ಉಲ್ಲೇಖಿಸಿ ಕ್ರಿಮಿನಲ್ ಮೊಕದ್ದಮೆ ಮತ್ತು ಇಲಾಖಾ ವಿಚಾರಣೆ ಪ್ರಕ್ರಿಯೆಗಳು ವಿಭಿನ್ನವಾಗಿದ್ದು, ಇವುಗಳಲ್ಲಿ ಸಾಕ್ಷಿಗಳ ಪರಿಗಣನೆಯ ಗುಣಮಟ್ಟ ಹಾಗೂ ಶಿಕ್ಷೆಯ ಪ್ರಮಾಣಗಳು ಬೇರೆ ಬೇರೆಯಾಗಿರುವುದರಿಂದ ಕ್ರಿಮಿನಲ್ ಪ್ರಕರಣದ ನಿರ್ಣಯವು ಇಲಾಖಾ ವಿಚಾರಣೆ ನಿರ್ಣಯಕ್ಕೆ ಬಾಧಕವಾಗುವುದಿಲ್ಲವೆಂದು ಸ್ಪಷ್ಟಪಡಿಸಿರುತ್ತದೆ.

ಮುಂದುವರೆದು, ಲೋಕಾಯುಕ್ತರವರಿಗೆ ವಹಿಸಲಾಗುವ ಪ್ರಕರಣಗಳಲ್ಲಿ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 13ರ ಅನುಸಾರ ಜಂಟಿ ಇಲಾಖಾ ವಿಚಾರಣೆ ನಡೆಸಲು ಆದೇಶ ಹೊರಡಿಸಿಲ್ಲವೆಂಬ ಏಕ ಮಾತ್ರ ಕಾರಣಕ್ಕೆ ನಡವಳಿ Vitiate ಆಗುವುದಿಲ್ಲವೆಂಬ ಅಭಿಪ್ರಾಯ ನೀಡಿರುತ್ತದೆ. ಒಟ್ಟಾರೆ ಈ ಪ್ರಕರಣದಲ್ಲಿ ಮಾನ್ಯ ಕೆ.ಎ.ಟಿ.ಯು ಲೋಕಾಯುಕ್ತರವರ ನಿರ್ಣಯ ಮತ್ತು ಅವಕಾಶದ ಕುರಿತು ನಿರ್ಣಯಿಸಿರುವುದರಿಂದ ಮೇಲ್ಮನವಿ ಸಲ್ಲಿಸುವ ಅಂಶಗಳು ಇರುವುದಿಲ್ಲ.

ಆದುದರಿಂದ ಸರ್ಕಾರಿ ವಕೀಲರು ನೀಡಿರುವ ಅಭಿಪ್ರಾಯ ಹಾಗೂ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಅರ್ಜಿ ಸಂಖ್ಯೆ: 20706-20708/2020ರಲ್ಲಿ ದಿನಾಂಕ:09.11.2021ರಂದು ನೀಡಿರುವ ಆದೇಶವನ್ನು ಒಪ್ಪಿ, ಲೋಕಾಯುಕ್ತ ಕಚೇರಿಯು ಕೈಗೊಳ್ಳುವ ಅಂತಿಮ ತೀರ್ಮಾನಕ್ಕೆ ಒಳಪಟ್ಟು ಶ್ರೀ ಚನ್ನಬಸಪ್ಪ ಮೆಕಾಲೆ, ಹಿಂದಿನ ಸ.ಕಾ.ಇಂ, ಶ್ರೀ ಬಸಯ್ಯ ಹಿರೇಮಠ, ಹಿಂದಿನ ಸ.ಕಾ.ಇಂ ಹಾಗೂ ಶ್ರೀ ಎಸ್.ಜಿ.ಪಾಟೀಲ, ಹಿಂದಿನ ಕಿ.ಇಂ, ಪಂ.ರಾ.ಇಂ.ಉಪವಿಭಾಗ, ಸುರಪುರ ಇವರುಗಳಿಗೆ ಸೀಮಿತವಾಗಿ ಪ್ರಕರಣವನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿದೆ. ಆದ್ದರಿಂದ ಈ ಕೆಳಕಂಡ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 06 ಜಿಪಅ 2022,</u>**
**<u>ಬೆಂಗಳೂರು, ದಿನಾಂಕ: 03.03.2022</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕೆ.ಎ.ಟಿ ಯ ಅರ್ಜಿ ಸಂಖ್ಯೆ:20706-20708/2020ರಲ್ಲಿ ದಿನಾಂಕ:09.11. 2021ರಂದು ನೀಡಿರುವ ಆದೇಶದ ಬಗ್ಗೆ ಲೋಕಾಯುಕ್ತ ಕಚೇರಿಯು ಕೈಗೊಳ್ಳುವ ಅಂತಿಮ ತೀರ್ಮಾನಕ್ಕೆ ಒಳಪಟ್ಟು ಈ ಕೆಳಕಂಡ ಅಧಿಕಾರಿ/ನೌಕರರುಗಳಿಗೆ ಸೀಮಿತವಾಗಿ ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 21 ಇಎನ್‌ಕ್ಯೂ 2018, ದಿನಾಂಕ:14.03.2018ರ ಆದೇಶವನ್ನು ರದ್ದುಪಡಿಸಿ ಅವರ ವಿರುದ್ಧದ ಪ್ರಕರಣವನ್ನು ಮುಕ್ತಾಯಗೊಳಿಸಿ ಸರ್ಕಾರವು ಆದೇಶಿಸಿದೆ.

1. ಶ್ರೀ ಚನ್ನಬಸಪ್ಪ ಮೆಕಾಲೆ, ಹಿಂದಿನ ಸಹಾಯಕ ಕಾಯಪಾಲಕ ಅಭಿಯಂತರರು, ಪಂ.ರಾ.ಇಂ . ಉಪವಿಭಾಗ, ಸುರಪುರ.
2. ಶ್ರೀ ಬಸಯ್ಯ ಹಿರೇಮಠ, ಹಿಂದಿನ ಸಹಾಯಕ ಕಾಯಪಾಲಕ ಅಭಿಯಂತರರು,. ಪಂ.ರಾ.ಇಂ . ಉಪವಿಭಾಗ, ಸುರಪುರ.
3. ಶ್ರೀ ಎಸ್.ಜಿ.ಪಾಟೀಲ, ಹಿಂದಿನ ಕಿರಿಯ ಇಂಜಿನಿಯರ್/ಶಾಖಾಧಿಕಾರಿ, ಪಂ.ರಾ.ಇಂ . ಉಪವಿಭಾಗ, ಸುರಪುರ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಕೆ. ನದೀಮ್ 3/3

**(ಕೆ.ನದೀಮ್ ಅಹ್ಮದ್),**
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ),
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

3/03

**ಇವರಿಗೆ:**

1. ಮಹಾಲೇಖಪಾಲರು, (ಅ ಮತ್ತು ಇ) ಕರ್ನಾಟಕ, ಬೆಂಗಳೂರು.
2. ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಛೇರಿ, ಬಹುಮಹಡಿ ಕಟ್ಟಡ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ.

4. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
5. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು(ದಕ್ಷಿಣ), ಬೆಂಗಳೂರು.
6. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಯಾದಗಿರಿ(ನೋಂದಾಯಿತ ಅಂಚೆ ಮುಖಾಂತರ).
7. ಸಂಬಂಧಪಟ್ಟ ಅಧಿಕಾರಿ/ನೌಕರರಿಗೆ ಮುಖ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಯಾದಗಿರಿ ಇವರ ಮುಖಾಂತರ.

ಪ್ರತಿಯನ್ನು:

1. ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ.
2. ಗ್ರಾ.ಅ.ಪಂ.ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ / ಜಂಟಿ ಕಾರ್ಯದರ್ಶಿ (ಆಡಳಿತ-1) ಇವರ ಆಪ್ತ ಕಾರ್ಯದರ್ಶಿ /ಆಪ್ತ ಸಹಾಯಕರು.
3. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ (ಸೇವೆಗಳು ಬಿ & ಸಿ).
4. ಹೆಚ್ಚುವರಿ ಪ್ರತಿ : ರಕ್ಷಾ ಕಡತ : ಕಂಪ್ಯೂಟರ್ ಸೆಲ್.